ನೋಡಿಯೇ ತಿಳಿದುಕೊಳ್ಳಬೇಕೇನು?'' ಎಂದರು ಎಲಹಂಕನಾಡಿನ ಡಣ್ಣಾಯಕರು.

ತಿರುವುತ್ತಿದ್ದ ಮೀಸೆಯ ಕೆಳಗೆ ಮಿಂಚಿದ ಕಿರುನಗೆಯೊಂದಿಗೆ ತನಗೆ ಸಂಬಂಧವೇ ಇಲ್ಲದ ಮಾತುಗಳನ್ನು ಕೇಳಿಸಿಕೊಳ್ಳುತ್ತಿರುವವರಂತೆ ಮೌನವಾಗಿ ಕುಳಿತಿದ್ದರು ಮಹಾರಾಜರಾದ ಇಮ್ಮಡಿ ದೇವರಾಯರು.

ಅಪ್ಪಾಜಿಯವರ ಪ್ರತಾಪದ ಬಗ್ಗೆ ಕೇಳಿ ವಿರೂಪಾಕ್ಷಿ ಮತ್ತು ಮಲ್ಲಿಕಾರ್ಜುನ ಹೆಮ್ಮೆಯಿಂದ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

``ಮಹಾರಾಜರು ಒಂದು ದೊಡ್ಡ ಅಪಾಯದಿಂದ ಪಾರಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಏಕೆ ಹೀಗಾಯಿತು? ಅದಕ್ಕೆ ಪರಿಹಾರವೇನಾದರೂ ಇದೆಯೇ? ಅದನ್ನು ನೋಡಿ ಹೇಳಿ!'' ಎಂದು ಸ್ವಲ್ಪ ಅಸಹನೆಯಿಂದ ಕೇಳಿದರು ಮಂತ್ರಿಗಳು.



``ಅದನ್ನೇ ಹೇಳಲು ಬಂದೆ ಸ್ವಾಮೀ! ನೋಡಿ ಪ್ರಜ್ವಲವಾದ ಸೂರ್ಯದೇವನನ್ನೂ ಒಮ್ಮೊಮ್ಮೆ ಕಾರ್ಮೋಡ ಮುಚ್ಚುತ್ತದೆ. ಈ ವಿಪತ್ತು ನಡೆದದ್ದೂ ಹಾಗೆಯೇ. ಬರಲಿರುವ ಸೂರ್ಯ ಗ್ರಹಣ ಅವರ ಜನ್ಮ ಕುಂಡಲಿಯ ಪ್ರಕಾರ ಅಷ್ಟು ಅನುಕೂಲವಾಗಿಲ್ಲ...''

``ಅಯ್ಯೋ! ಆ ದೋಷಕ್ಕೆ ಪರಿಹಾರವಿಲ್ಲವೇ?'' ಪೊನ್ನಲಾದೇವಿ ಭಯದಿಂದ ಚಡಪಡಿಸಿದಳು.

``ಭಯ ಬೇಡಿ ಮಹಾರಾಣಿಯವರೇ. ಗ್ರಹಣ ಕಾಲದಲ್ಲಿ ಮಾಡುವ ಪೂಜೆ ಪುನಸ್ಕಾರಗಳಿಂದಲೂ ದಾನ ಧರ್ಮಗಳಿಂದಲೂ ಈ ದೋಷವನ್ನು ಪರಿಹರಿಸಬಹುದು.''

``ವಿರೂಪಾಕ್ಷನಿಗೆ ತುಲಾಭಾರ ಸೇವೆಯನ್ನು ಸಲ್ಲಿಸುವುದಾಗಿ ಆಗಲೇ ಹರಕೆ ಮಾಡಿಕೊಂಡೆ. ಆದಷ್ಟು ಬೇಗ ಅದನ್ನು ನೆರವೇರಿಸಬೇಕು. ಇನ್ನೂ ನೀವು ಸೂಚಿಸುವ ಎಲ್ಲ ಪರಿಹಾರಗಳನ್ನೂ ಮಾಡೋಣ...'' ಜ್ಯೋತಿಷಿ ಮುಗಿಸುವಷ್ಟರಲ್ಲಿ ಮಹಾರಾಣಿ ಪೊನ್ನಲಾದೇವಿ ತನ್ನ ಹರಕೆಯ ಬಗ್ಗೆ ಪ್ರಸ್ತಾಪಿಸಿದಳು.

``ಮಹಾರಾಣಿ, ರಾಜನಾದವನಿಗೆ ಇಂತಹ ಆಪತ್ತುಗಳನ್ನು ಎದುರಿಸುವುದು ಸಹಜ ಮತ್ತು ಅನಿವಾರ್ಯ. ಮಹಾರಾಣಿಯಾಗಿ ಇದಕ್ಕೆಲ್ಲ ಹೆದರುವುದುಂಟೆ?'' ಮೊದಲ ಬಾರಿಗೆ ಮಾತನಾಡಿದರು ಮಹಾರಾಜರು.

``ನನ್ನದೂ ಒಂದು ಹರಕೆ ಇದೆ. ನಡೆಸಿಕೊಡುವಿರಾ ಅಪ್ಪಾಜಿ?'' ವಿರೂಪಾಕ್ಷಿ ಓಡೋಡುತ ಬಂದು ಮಹಾರಾಜರ ಕೈ ಹಿಡಿದುಕೊಂಡಳು.

``ಓ ನನ್ನ ವೀರಪುತ್ರಿ! ಮೊದಲೇ ನಿನಗೊಂದು ಉಡುಗೊರೆ ಕೊಡಬೇಕಿತ್ತು, ಅಲ್ಲವೇ? ನಿನಗೇನು